ಅನ್ನದಾನೀಶ್ವರ ಶ್ರೀ ಅವರ 'ಪಾರಮೇಶ್ವರಾಗಮ ಸಾರ' ಗ್ರಂಥ ಲೋಕಾರ್ಪಣೆ

# ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕಾರ ನೀಡಿ: ಹೊರಟ್ಟಿ

ಪ್ರಜಾವಾಣಿ ವಾರ್ತೆ

ಮುಂಡರಗಿ: 'ಒಬ್ಬ ತಾಯಿಯು ನೂರು ಶಿಕ್ಷಕರಿಗೆ ಸಮ, ತಾಯಂದಿರು ಜವಾಬ್ದಾರಿಯಿಂದ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಸಂಸ್ಕಾರ ನೀಡಬೇಕು. ಮಕ್ಕಳ ಸರ್ವಾಂಗೀಣ ಉನ್ನತಿಯಲ್ಲಿ ತಾಯಿಯ ಪಾತ್ರ ಹಿರಿದು. ತಂದೆ, ತಾಯಿಯರನ್ನು ಕಡೆಗಣಿಸಬಾರದು' ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ಅವ್ವ ಸೇವಾ ಟ್ರಸ್ಟ್ ಸಹಯೋಗದಲ್ಲಿ ಮಂಗಳವಾರ ಪಟ್ಟಣದ ಅನ್ನದಾನೀಶ್ವರ ಮಠದಲ್ಲಿ ಹಮ್ಮಿಕೊಂಡಿದ್ದ ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿ ಜಯಂತಿ ಮತ್ತು ಮಠದ 9ನೇ



ಮುಂಡರಗಿಯ ಅನ್ನದಾನೀಶ್ವರ ಮಠದಲ್ಲಿ ಹಮ್ಮಿಕೊಂಡಿದ್ದ ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿ ಜಯಂತಿ ಸಮಾರಂಭದಲ್ಲಿ ಗಣ್ಯರು ಅನ್ನದಾನೀಶ್ವರ ಸ್ವಾಮೀಜಿ ಅವರ 'ಪಾರಮೇಶ್ವರಾಗಮ ಸಾರ' ಗ್ರಂಥವನ್ನು ಲೋಕಾರ್ಪಣೆಗೊಳಿಸಿದರು

ಪೀಠಾಧಿಪತಿಗಳ ಪುಣ್ಯ ಸ್ಮರಣೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಶಾಸಕಿ ಲತಾದೇವಿ ಮಲ್ಲಿಕಾರ್ಜುನ ಮಾತನಾಡಿ, 'ಉತ್ತರ ಕರ್ನಾಟಕ ಸೇರಿದಂತೆ ನಮ್ಮ ರಾಜ್ಯದಲ್ಲಿ ಎಲ್ಲ ಬಡ ಮಕ್ಕಳಿಗೆ ಅನ್ನ, ಅಕ್ಷರ ಹಾಗೂ ಆಶ್ರಯ ನೀಡಿದ ಕೀರ್ತಿ ಮಠಗಳಿಗೆ ಸಲ್ಲುತ್ತದೆ. ಮಠಗಳು ಇಲ್ಲದಿದ್ದರೆ ಲಕ್ಷಾಂತರ ಜನರು ಅನಕ್ಷರಸ್ಥರಾಗಿ ಬದುಕಬೇಕಿತ್ತು. ಅಂತಹ ಮಠಗಳಲ್ಲಿ ಅನ್ನದಾನೀಶ್ವರ ಮಠವೂ ಒಂದಾಗಿರುವುದು ಸಂತಸದ ಸಂಗತಿ' ಎಂದರು. ಈಚೆಗೆ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸೌಭಾಗ್ಯ ಬೀಳಗಿಮಠ ಮಾತನಾಡಿದರು.

ಅನ್ನದಾನೀಶ್ವರ ಸ್ವಾಮೀಜಿ ಅವರು ಸಮಾರಂಭದ ಸಾನ್ನಿಧ್ಯ ವಹಿಸಿದ್ದರು. ಲಿಂಗನಾಯಕನಹಳ್ಳಿಯ ನಿರಂಜನ ದೇವರು 'ಜಂಗಮ ಪುಂಗವ ಅಲ್ಲಮ ಪ್ರಭು' ಕುರಿತು ಹಾಗೂ ನಿವೃತ್ತ ಪ್ರಾಚಾರ್ಯ ಎಸ್.ಬಿ.ಕರಿಭರಮಗೌಡರ ಅವರು 'ಲಿಂ.ಜಗದ್ಗುರುಗಳ ಶೈಕ್ಷಣಿಕ ಸೇವೆಗಳು' ಕುರಿತು ಉಪನ್ಯಾಸ ನೀಡಿದರು. ಶಶಿಧರ ಸಾಲಿ ಮಾತನಾಡಿದರು.

ಅನ್ನದಾನೀಶ್ವರ ಸ್ವಾಮೀಜಿ ಅವರ 'ಪಾರಮೇಶ್ವರಾಗಮ ಸಾರ'ದ ಪುನರ್ ಮುದ್ರಿತ ಗ್ರಂಥ ಲೋಕಾರ್ಪಣೆಗೊಂಡಿತು. ಸೌಭಾಗ್ಯ ಬೀಳಗಿಮಠ, ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ಪುರಸ್ಕೃತರಾದ ಮಂಜುಳಾ ಇಟಗಿ, ಆರ್.ಬಿ.ಡಂಬಳಮಠ, ಜಗದ್ಗುರು ಅಕ್ಕನ ಬಳಗದ ಕಾರ್ಯಕರ್ತೆಯರನ್ನು ಮಠದಿಂದ ಸನ್ಮಾನಿಸಲಾಯಿತು.

ಆಡಳಿತಾಧಿಕಾರಿ ಬಿ.ಜಿ.ಜವಳಿ, ಶಿಕ್ಷಕ ಎಸ್.ಎಸ್.ಇನಾಮತಿ, ಯದ್ದಲದೊಡ್ಡಿಯ ಮಹಾಲಿಂಗ ಸ್ವಾಮೀಜಿ, ಅಳವುಂಡಿಯ ಮರುಳಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಬಸವರಾಜ ಧಾರವಾಡ ಇದ್ದರು.